# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 93/2021**

| | | |
|---|---|---|
| ಸಾಕ್ಷಿದಾರರ ಹೆಸರು | : ಪಾಪಣ್ಣ | ಪಿಡಬ್ಲ್ಯೂ ಃ 22 |
| ತಂದೆಯ / ಗಂಡನ ಹೆಸರು | : ಲೇಟ್ ಮರಿಯಪ್ಪ | ಸಿಡಬ್ಲ್ಯೂ ಃ 47 |
| ವಯಸ್ಸು | :48 ವರ್ಷ | |
| ಉದ್ಯೋಗ | : ಎ ಎಸ್ ಐ, ಸರಸ್ವತಿಪುರಂ ಪೊಲೀಸ್ ಠಾಣೆ , ಮೈಸೂರು | |
| ವಾಸಸ್ಥಳ | : ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 22.06.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. 2020 ರಿಂದ 2022 ರವೆಗೆ ನಾನು ಮೈಸೂರಿನ ನರಸಿಂಹರಾಜ ಪೊಲೀಸ್ ಠಾಣೆಯಲ್ಲಿ ಎ ಎಸಿ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ಈ ಪ್ರಕರಣಕ್ಕೆ ಸಂಬಧಪಟ್ಟಂತೆ 1 ನೇ ಆರೋಪಿ ವಿನಯ್ ಅಲಿಯಾಸ್ ಪರೋಟ ಈತನ ಪತ್ತೆಗಾಗಿ ತನಿಖಾಧಿಕಾರಿಗಳು ನನ್ನನ್ನು ಹಾಗೂ ಹೆಚ್ ಸಿ 22 ಮಂಜುನಾಥ್ ಮತ್ತು ಪಿಸಿ 708 ಮಹೇಶ್ ರವರನ್ನು ನೇಮಿಸಿದ್ದರು. ಅದರಂತೆ ನಾವುಗಳು ಸದರಿ ಆರೋಪಿಯ ತಲಾಷ ನಲ್ಲಿದ್ದಾಗ , ನಮಗೆ ಬಾತ್ಮಿದಾರರಿಂದ , 1 ನೇ ಆರೋಪಿ ವಿನಯ್ ಅಲಿಯಾಸ್ ಪರೋಟ ಕೇರಳಾದ ಕೊಟ್ಟಾಯಂ ನ ಸರಹದ್ದಿನಲ್ಲಿ ಇರುತ್ತಾನೆ ಎಂದು ತಿಳಿದು ಬಂತು. ಅದರಂತೆ ನಾವು ಕೊಟ್ಟಾಯಂ ನ ಸರಹದ್ದು ಪಿಲ್ಲಿಚರ ಊರಿನಲ್ಲಿ

ಗಸ್ತಿನಲ್ಲಿದ್ದಾಗ  ಒಂದು ಹೋಟೆಲ್ ನ ಬಳಿ ಒಬ್ಬ ಆಸಾಮಿ ನಮ್ಮನ್ನು ಕಂಡು ಓಡಲು ಪ್ರಯತ್ನ ಪಟ್ಟ. ಅದು 09.02.2021 ರ ರಾತ್ರಿ 08.00 ಗಂಟೆಯ ಸಮಯವಾಗಿತ್ತು. ಆ ಹೋಟೆಲ್ ನ ಹೆಸರು ಆರ್ಯನ್ ಎಂದಾಗಿತ್ತು. ಆ ವ್ಯಕ್ತಿಯನ್ನು ಹಿಡಿದು ವಿಚಾರಿಸಲಾಗಿ ಆತ ತನ್ನ ಹೆಸರು ವಿನಯ್ ಅಲಿಯಸ್ ಪರೋಟ ಅಲಿಯಾಸ್ ಸೆಲ್ವಿ ಸ್ಟಾರ್ , ಮೈಸೂರಿನ ಕೆಸರೆ ನಿವಾಸಿ ಎಂದು ತಿಳಿಸಿದ. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಆತನನ್ನು ಮುಂದುವರೆದು ವಿಚಾರಿಸಿದಾಗ ಈ ಪ್ರಕರಣ ಕೊಲೆಯನ್ನು ತಾನೇ ಮಾಡಿರುವುದಾಗಿ ಒಪ್ಪಿದ. ಆತನನ್ನು ನಮ್ಮ ವಶಕ್ಕೆ ಪಡೆದು ಅಲ್ಲಿಂದ ಮೈಸೂರಿನ ನಮ್ಮ ಠಾಣೆಗೆ ದಿ.10.02.2021 ರಂದು ಬೆಳಿಗ್ಗೆ 08.40 ರ ಸಮಯಕ್ಕೆ ಕರೆ ತಂದು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿ ವರದಿ ಮಾಡಿಕೊಂಡಿರುತ್ತೇವೆ. ಸದರಿ ವರದಿಯನ್ನು ಈಗ ನೊಡುತ್ತಿದ್ದೇನೆ . ಅದರ ಮೇಲೆ ನನ್ನ ಸಹಿ ಇರುತ್ತದೆ. ಅದನ್ನು ನಿಪಿ.60 ಎಂತಲೂ , ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ.60(ಎ) ಎಂತಲೂ ಗುರುತಪಡಿಸಿಕೊಳ್ಳಲಾಯಿತು. ಆ 1 ನೇ ಆರೋಪಿ ಇಂದು ನ್ಯಾಯಾಲಯದ ಮುಂದಿದ್ದಾನೆ. ಆತನನ್ನು ನೋಡಿ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

3. ನನನ್ನು 1 ನೇ ಆರೋಪಿಯ ಪತ್ತೆಗಾಗಿ ನಮ್ಮ ಠಾಣೆಯ ಇನ್ಸ್‌ಪೆಕ್ಟರ್ ರವರು ನೇಮಿಸಿದ್ದರು. ಮೌಖಿಕವಾಗಿ ಆದೇಶಿಸಿದ್ದರು. ಆರೋಪಿಯ ಚಹರೆಯ ಬಗ್ಗೆ ನಮಗೆ ಮಾಹಿತಿ ಇತ್ತು. ಕೊಲೆ ಮಾಡುವಾಗ ತೆಗೆದಿದ್ದಂತಹ ಪೋಟೋ ಇತ್ತು. ಬಾತ್ಮೀದಾರರಿಂದ 1 ನೇ ಆರೋಪಿಯ ಚಹರೆಯ ಬಗ್ಗೆ ನಮಗೆ ತಿಳಿದಿತ್ತು. ನಮ್ಮ ಪೊಲೀಸ್ ಠಾಣೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯವರಿಗೆ ಆತನ ಚಹರೆಯ ಬಗ್ಗೆ ತಿಳಿಸಿ, ತೋರಿಸಿದ್ದರು.

ಕೇರಳದ ಕೊಟ್ಟಾಯಂ ಸುತ್ತ ಮುತ್ತಲಿನಲ್ಲಿ ಆತ ಇದ್ದಾನೆ ಎಂದು ತಿಳಿಸಿದ್ದರು. ನಾನು ಕೇರಳಕ್ಕೆ ಹೊರಡುವ ಮೊದಲು ಪಾಸ್ ಪೋರ್ಟ್‌ನ್ನು ಪಡೆದಿದ್ದೆ. ಫೆಬ್ರವರಿ 5 ನೇ ತಾರೀಖಿನಂದು ನಾವು ಹೊರೆಟೆವು. ನಾವು ಮೂರು ರಾತ್ರಿಗಳು ಕೊಟ್ಟಾಯಂ ನಲ್ಲಿ ಉಳಿದಿದ್ದೆವು. ವಾಪಾಸ್ 1 ನೇ ಆರೋಪಿಯೊಂದಿಗೆ ಠಾಣೆಗೆ ಬಂದ ನಂತರ ಪಾಸ್ ಪೋರ್ಟ್‌ನ್ನು ಪಿಐ ರವರಿಗೆ ಹಿಂದಿರುಗಿಸಿದ್ದೇನೆ.

4. 5 ನೇ ತಾರೀಖಿನಂದು ಮೈಸೂರಿನಿಂದ ಹೊರಟು ಮಧ್ಯ ರಾತ್ರಿ ಕೊಟ್ಟಾಯಂ ನ್ನು ತಲುಪಿದ್ದೆವು. ಅಲ್ಲಿ ಲಾಡ್ಜ್ ನಲ್ಲಿ ಉಳಿದಿದ್ದೆವು. ಆರೋಪಿ ಕೇರಳಾದವನು ಎಂದು ತಿಳಿದಿತ್ತು. ಆದರೆ ಕೇರಳ ರಾಜ್ಯದಲ್ಲಿ ಆತನ ಊರು ಯಾವುದು ಎಂಬುದು ತಿಳಿದಿರಲಿಲ್ಲ. ನಾವೆಲ್ಲರೂ ಮಫ್ತಿಯಲ್ಲಿದ್ದೆವು. ಕೇರಳ ರಾಜ್ಯ ಕ್ಕೆ ಹೋದ ನಂತರ ಸಂಬಂದಪಟ್ಟ ಪೊಲೀಸ್ ಠಾಣೆಗೆ ಹೋಗಿ ಮಾಹಿತಿಯನ್ನು ತಿಳಿಸಿದ್ದೆವು. ಯಾವ ಊರಿನ ಪೋಲಿಸ್ ಠಾಣೆಗೆ ಹೋಗಿ ಮಾಹಿತಿ ತಿಳಿಸಿದ್ದೆವು ಎನ್ನುವುದು ನನಗೀಗ ನೆನಪಿಲ್ಲ.

5. ನಾನು ಹೇಳಿದಂತೆ ಫಬ್ರವರಿ 5 ರಂದು ಮೃಸೂರನ್ನು ಬಿಟ್ಟು ಕೊಟ್ಟಾಯಂ ಗೆ ಹೋಗಿರುವುದಿಲ್ಲ ಎನ್ನುವುದು ಸರಿಯಲ್ಲ. 1 ನೇ ಆರೋಪಯನ್ನು ನಾವು ಕೇರಳ ರಾಜ್ಯದಲ್ಲಿ ನಮ್ಮ ವಶಕ್ಕೆ ಪಡೆದಿರುವುದಿಲ್ಲ ಎನ್ನುವುದು ಸರಿಯಲ್ಲ. 1 ನೇ ಆರೋಪಿಯನ್ನು ಹಿಡಿದಾಗ ರಾತ್ರಿ 08.00 ಗಂಟೆಯಾಗಿತ್ತು. ಈ ವಿಷಯವನ್ನು ಅಲ್ಲಿಯ ಸಂಬಂದಪಟ್ಟ ಪೊಲೀಸ್ ಠಾಣೆಗೆ ಮಾಹಿತಿ ತಿಳಿಸಿದ್ದೆವು. ನಾವು ಒಂದು ಖಾಸಗಿ ವಾಹನವನ್ನು ಮಾಡಿಕೊಂಡು ಹೋಗಿದ್ದೆವು. ಅದರ ನಂಬರ್ ನನಗೀಗ ನೆನಪಿಲ್ಲ. ಅದರ ಚಾಲಕನ ಹೆಸರು ನನಗೀಗ ನೆನಪಿಲ್ಲ.

6. ನಿಪಿ.60 ರಂತೆ ನಾನು ಪಿಐ ರವರ ಮುಂದೆ ವರದಿ ಮಾಡಿಕೊಂಡಿರುವುದಿಲ್ಲ ಎನ್ನುವುದು ಸರಿಯಲ್ಲ.

ಮರು ವಿಚಾರಣೆ : ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**